

# ಪುಸ್ತಕ ಬದಲಿಸೀತು ಓದಿದರೆ

ಪುಸ್ತಕ ಬದಲಿಸೀತು ಓದಿದರೆ, ತಾಯಿ
ಬದಲಿಸಬಹುದು ಮಲಗಿದರೆ ಅವಳ ಮಡಿಲಲ್ಲಿ, ರಸ್ತೆ
ಬದಲಾಗಬಹುದು ಕೊನೆಯವರೆಗೂ ನಡೆದುಹೋದರೆ
ಬದಲಾಯಿಸಿದ್ದಲ್ಲದೆ ಯಾವುದೂ ಬದಲಾಗುವುದಿಲ್ಲ

ಪ್ರತಿಧ್ವನಿಯಿರದ ವಿಚಾರಕ್ಕೆ ನೆಲೆಯೆಂಬುದೇ ಇಲ್ಲ.
ನಿದ್ದೆಯೇ ಬೇಕಿಲ್ಲ ದುಃಸ್ವಪ್ನಗಳ ಸುರುಳಿ ಬಿಚ್ಚುವುದಕ್ಕೆ
ಹತಾರಗಳುಂಟು ಮಾಯುತ್ತಿರುವ ಗಾಯ ಕೆದಕುವುದಕ್ಕೆ
ಸಕಾಲವೀಗ ಯಾತನೆಯ ಸಮವಾಗಿ ಹಂಚುವುದಕ್ಕೆ

ಮುಸ್ಸಂಜೆ ಮಾಯವಾದದ್ದೆ ಆ ಮನುಷ್ಯ ಹೊರಟುಹೋದ
ಹಿಂದೆಯೇ ಬಿಟ್ಟು ತನ್ನ ಕಳೇಬರವನ್ನು;
ಚೇರುತ್ತಲೇ ಇದೆ ಆಕಾಶ ಕೆಳಕ್ಕಿಳಿಯಲಾಗದೆ
ಮೇಲಕ್ಕೇರಲಾಗದೆ.
ಮನೆಮನೆಗಳು ಮಾತಾಡಿಕೊಳ್ಳುತ್ತಿವೆ ಪರಸ್ಪರ
ಕಿಟಕಿಗಳ ಭಾಷೆಯಲ್ಲಿ

ಥಿಯೇಟರು ಎಲ್ಲಿದೆಯೆಂದು ಗೊತ್ತು, ಯಾವ ಸಿನಿಮಾ ಎಂದು ಗೊತ್ತು
ಗೊತ್ತಿಲ್ಲ ಯಾರು ಕೂರುತ್ತಾರೆಂದು ಅಕ್ಕಪಕ್ಕ